Reg. No. | | | | | | | | | |

# BCMKAL 204

ಕ್ರೆಡಿಟ್ ಆಧಾರಿತ ಮೂರನೇ ಚತುರ್ಮಾಸ ದ್ವಿತೀಯ ಬಿ.ಕಾಂ. ಪದವಿ ಪರೀಕ್ಷೆ, ನವೆಂಬರ್ / ಡಿಸೆಂಬರ್ 2018

**(2018 – 19 Batch Onwards Scheme)**

**ಕನ್ನಡ ಭಾಷೆ**

Time : 3 Hours

Max. Marks : 80

I. **ಒಂದು** ವಿಭಾಗದಿಂದ **ಒಂದು** ಪ್ರಶ್ನೆಯಂತೆ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಮಂಟೇ ಸ್ವಾಮಿಯು ಕಲ್ಯಾಣದ ಶರಣರ ಕಣ್ಣು ತೆರೆಸಿದ ಪ್ರಸಂಗವನ್ನು ವಿವರಿಸಿರಿ. **8**

**ಅಥವಾ**

ಧೃತರಾಷ್ಟ್ರ ಗಾಂಧಾರಿಯರು ಸಂಧಾನಕ್ಕಾಗಿ ದುರ್ಯೋಧನನ ಮನಃ ಪರಿವರ್ತನೆಗೆ ನಡೆಸಿದ ಪ್ರಯತ್ನ ಹಾಗೂ ಪರಿಣಾಮಗಳನ್ನು ವಿವರಿಸಿರಿ.

2) 'ಬದುಕಿನ ಇಬ್ಬದಿಗಳು' ಪ್ರಬಂಧದ ಆಶಯವನ್ನು ಪರಿಚಯಿಸಿರಿ. **8**

**ಅಥವಾ**

'ಜಾಗತೀಕರಣದ ದುಷ್ಪರಿಣಾಮಗಳನ್ನು ದೇಶೀಯ ಜಾನಪದ ಸತ್ತ್ವವು ಸಮರ್ಥವಾಗಿ ಎದುರಿಸಬಲ್ಲುದು'– ಜಾಗತೀಕರಣ ಮತ್ತು ಜನಪದ ಪ್ರಬಂಧದ ಆಧಾರದಲ್ಲಿ ಸಮರ್ಥಿಸಿರಿ.

3) ಮಾರಣಾಂತಿಕ ರೋಗವೆಂದೇ ವೈದ್ಯ ಲೋಕದಲ್ಲಿ ಗುರುತಿಸಿಕೊಂಡ ಕ್ಯಾನ್ಸರ್ ವಿರುದ್ಧ ಹೋರಾಟ ನಡೆಸಿ, ಸಾವನ್ನು ಜಯಿಸಿದ ನಿರೂಪಕಿ ಭಾರತಿಯವರ ಅನುಭವಗಳನ್ನು ವಿಶ್ಲೇಷಿಸಿರಿ. **8**

**ಅಥವಾ**

ನಿರೂಪಕಿ ಭಾರತಿಯವರು ಪರಿಚಯಿಸಿದ ಡಾ. ಶ್ರೀನಾಥರ ವ್ಯಕ್ತಿತ್ವ ಹಾಗೂ ಚಿಕಿತ್ಸೆ ಕುರಿತು ವಿವರಿಸಿರಿ.

II. **ಒಂದು** ವಿಭಾಗದಿಂದ **ಒಂದರಂತೆ ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ರೂಪ ಹಾಸನರ 'ತನ್ನಷ್ಟಕ್ಕೆ' ಕವನದ ಆಶಯವನ್ನು ವಿವರಿಸಿರಿ. **5**

**ಅಥವಾ**

ಅಳಿಯ ಕಟ್ಟು ಅಥವಾ ಮಾತೃಪ್ರಧಾನ ಪದ್ಧತಿ ಬೆಳೆದು ಬರಲು ಕಾರಣವಾದ ಐತಿಹ್ಯವನ್ನು ವಿವರಿಸಿರಿ.

2) 'ಜಾಗತೀಕರಣ ಹಾಗೂ ಜನಪದ' ಪ್ರಬಂಧದಲ್ಲಿ ರೂಪಕವಾಗಿ ಬಂದ ಇಲಿ ಮತ್ತು ಹುಲಿಗಳ ಕಥೆಯನ್ನು ಪ್ರಬಂಧದ ಆಶಯದ ಹಿನ್ನೆಲೆಯಲ್ಲಿ ಚರ್ಚಿಸಿರಿ. **5**

**ಅಥವಾ**

ಜೀಬ್ರಾ ಫಿಂಚ್ ಹಕ್ಕಿಯ ಲಿಂಗ ಪರಿವರ್ತನೆಗೆ ಕಾರಣವಾದ ಅಂಶಗಳು ಯಾವುವು ?

3) ಕ್ಯಾನ್ಸರ್ ರೋಗಿಗೆ ಆತ್ಮವಿಶ್ವಾಸವನ್ನು ತುಂಬುವ ಅಗತ್ಯವನ್ನು ನಿರೂಪಕಿಯ ಅನುಭವಗಳ ಆಧಾರದ ಮೇಲೆ ವಿವರಿಸಿರಿ. 5

**ಅಥವಾ**

ಕಿಮೋಥೆರಪಿ ಚಿಕಿತ್ಸೆಯ ಕುರಿತು ಬರೆಯಿರಿ.

III. **ಒಂದು** ಪದ್ಯದ ಸಂದರ್ಭ ಹಾಗೂ ಭಾವಾರ್ಥದೊಂದಿಗೆ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

1) ಸಾಧಿಸುವೆಂ ಪಲ್ಗುಣನಂ
ಸಾಧಿಸುವೆಂ ಪವನಸುತನ ಬಸಿರೆಂ ಹಾ ಕ
ರ್ಣ ದುಶ್ಯಾಸನ ತೆಗೆವೆಂ
ನಿರ್ದೋ‌ಷಿ ಬಳಿಕ್ಕೆ ಯಮಜನೊಳ್ ಪುದುವಾಳ್ವೆಂ.

2) ಆಮ್ಮಗನೆ ನಾಗೆ ಧರ್ಮಜ
ನೇಮ್ಮಗನಲ್ಲನೆ ಬಳಿಕ್ಕೆ ನೀಮುಂ ತಾಮುಂ
ನಿಮ್ಮೊಳ್ ನೇರ್ಪಡುಗಿಡದೆ ಸು
ಖಮ್ಮುನ್ನಿನ ತೆರದೆ ಬಾಳ್ವುದಾಂ ಬೆಸಕೆಯ್ವೆಂ.

IV. ಅ) **ಎರಡು** ಪ್ರಶ್ನೆಗಳಿಗೆ ಸಂದರ್ಭ, ಸ್ವಾರಸ್ಯ ಬರೆಯಿರಿ. **(2×4=8)**

1) ಉಳ್ಳಾಲದ ರಾಣಿ ಅಬ್ಬಕ್ಕ 'ಮಣ್ಣಿನ ಮಗಳು ಅಬ್ಬಕ್ಕಾ'
2) ನೋಡಪ್ಪ ಧರೆಗೆ ದೊಡ್ಡವರು ಬರುತವರೆ
3) ನಾವೆಷ್ಟಾದರೂ ಜೋತು ಬೀಳಬಹುದು ಅದು ಆತುಕೊಳ್ಳುವುದಿಲ್ಲವಷ್ಟೆ
4) ನಂಟಿದ್ದೂ ಅಂಟಿಯೂ ಅಂಟದಂತೆ.

ಆ) **ಎರಡರ** ಟಿಪ್ಪಣಿ ಬರೆಯಿರಿ. **(2×4=8)**

1) ನೆಗೆದು ಬಿದ್ದು ನೆಲ್ಲಿಕಾಯಿಯಾಗು
2) ನಿಸಾರ್ ಅಹ್ಮದ್
3) 'ಮುಗಿಯದ ಕಥೆ' ಯ ಸುಬ್ಬಣ್ಣ ಹಾಗೂ ಸರಸು
4) ಹೋಳಿಗೆ ಪದದ ನಿಷ್ಪತ್ತಿ.

ಇ) **ಎರಡರ** ಟಿಪ್ಪಣಿ ಬರೆಯಿರಿ. **(2×4=8)**

1) ನಿರೂಪಕಿ ಭಾರತಿಯವರ ಫ್ರೆಂಡ್ಸ್
2) ನಿರೂಪಕಿ ನೇಮಿಸಿಕೊಂಡ ಅಡುಗೆಯವಳು
3) ಬಯಾಪ್ಸಿ
4) ನಿರೂಪಕಿಯ ವಿಗ್.

V. ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿರಿ. (1×12=12)

1) ಮಂಟೇಸ್ವಾಮಿ ಧರಿಸಿದ ವೇಷ ಯಾವುದು ?

2) ಕೊಂಕಣಿ ಅಂತರ್ಜಾಲ ಪತ್ರಿಕೆ ಯಾವುದು ?

3) ಎಸ್.ಯು. ಪಣಿಯಾಡಿಯವರು ಸ್ಥಾಪಿಸಿದ ಪತ್ರಿಕೆಯ ಹೆಸರೇನು ?

4) 'ಒಡೆಯರಲ್ಲ ಸೇವಕರು' ಕೃತಿ ರಚಿಸಿದವರು ಯಾರು ?

5) 'ಕಾದಂಬರಿಯ ಸಾರ್ವಭೌಮ' ಎಂದು ಯಾರನ್ನು ಕರೆಯುತ್ತಾರೆ ?

6) ಯಾವ ದಿನವನ್ನು ವಿಶ್ವಪರಿಸರ ದಿನವೆಂದು ಆಚರಿಸಲಾಗುತ್ತಿದೆ ?

7) 'ಬದುಕಿನ ಇಬ್ಬದಿಗಳು' ಪ್ರಬಂಧವನ್ನು ಬರೆದವರು ಯಾರು ?

8) ಕೊಂಕಣಿ ಭಾಷೆಯ ಮಹಾಕವಿ ಎಂದು ಯಾರನ್ನು ಕರೆಯುತ್ತಾರೆ ?

9) ದೇಹಕ್ಕೆ ರೋಗ ತಗಲಿದಾಗ ಸೈನಿಕರಂತೆ ಹೋರಾಡುವ ರಕ್ತಕಣಗಳ ಹೆಸರೇನು ?

10) ಕ್ಯಾನ್ಸರ್ ರೋಗಿಯೊಬ್ಬನಿಗೆ ಕೊಡಬಹುದಾದ ಅತ್ಯುತ್ತಮ ಗಿಫ್ಟ್ ಯಾವುದು ?

11) ನಿರೂಪಕಿ ಭಾರತಿಯವರು ಅಮರೇಶ್ ಪುರಿಯನ್ನು ಯಾವ ಸಂದರ್ಭದಲ್ಲಿ ನೆನಪಿಸಿಕೊಂಡರು ?

12) ನಿರೂಪಕಿ ಭಾರತಿಯವರಿಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರೇನು ?

---